Bapuji Educational Association (R.)

# R.L. Law College

Akkamahadevi Road, P.J. Extension, DAVANGERE – 2 (Karnataka)
Affiliated to Karnataka State Law University, Hubli. Recognised by the Bar Council of India – New Dehli.
NAAC Accredited – 'B+'

ಆರ್.ಎಲ್. ಕಾನೂನು ಕಾಲೇಜು

ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ,ದಾವಣಗೆರೆ– 2

Offoce: 08192 – 250237
Website : WWW.rllcdvg.org
Email : rllc_dvg@yahoo.com

**Ref. No. RLLC/** **Date :24/04/2026**

## REPORT ON SOCIAL AWARENESS SKIT PROGRAMME

A socially relevant and thought-provoking skit was presented by the 2nd Year LL.B. students of R.L. Law College, Davangere, in associated with District Legal Services Authority, District Administration, Zilla Panchayat, Women and Child Development Department. the objective of creating awareness on the traditional practice of separating women from their homes during menstruation. The students effectively portrayed the social stigma, discrimination, and hardships faced by women due to such customs. The skit conveyed a strong message on the importance of dignity, equality, and the need for progressive social reform in society. Through their impactful performance, the students highlighted the necessity of changing outdated mindsets and promoting awareness regarding menstrual health and women's rights. The programme was conducted in the esteemed presence of Hon'ble Smt. Vela D.K., Principal District and Sessions Judge, Davangere, and Sri Mahavir Karennavar, Senior Civil Judge, and Sri Sri Sri M.N.P. Mahanta Rudreshwara Mahaswamy, whose gracious presence added significance to the occasion. Their encouragement inspired the students and audience alike. The event was appreciated by the teaching staff, students, and guests for addressing an important social issue through an engaging and meaningful performance.






Photo 1 Dignitaries on the dais with Sri M.N.P. Mahanta Rudreshwara Mahaswamy,Ma'am and Senior Civil Judge Mahavir Karennavar S



Photo 2 Lighting of the lamp by the dignitaries




Photo 3 Students performing a scene from the skit




Photo 4 Students performing a powerful skit scene highlighting the hardships, stigma, and social discrimination



Photo 5 taking a pledge to end this harmful practice and promote dignity, equality, and social awareness.



Students of 2nd Year LL.B. posing together after presenting a social awareness skit promoting dignity, equality, and progressive change.

www.vijayavani.net
ನಂ.1 ವಿಜಯವಾಣಿ ಕನ್ನಡ ದಿನಪತ್ರಿಕೆ
ಶನಿವಾರ 25 ಏಪ್ರಿಲ್ 2026 | 25 APRIL
ದಾವಣಗೆರೆ

**ಟಾಪ್ ನ್ಯೂಸ್**
... ಗ್ಯಾಂಗ್ ಸಕ್ರಿಯ ಸದಸ್ಯ ಕಿರಿಮಂಜೇಶ್ವರ ಗ್ರಾಮದ ಜನತಾ ಕಾಲನಿ ನಿವಾಸಿ ಮಹಮ್ಮದ್ ಅಲ್ಫಾಜ್(25) ಎಂಬಾತನನ್ನು ಉಡುಪಿ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿ ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿಕೊಟ್ಟಿದ್ದಾರೆ.

### ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶೆ ಡಿ.ಕೆ. ವೇಲು ಅನಿಸಿಕೆ | ಮಾಯಕೊಂಡದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ

# ಉತ್ತಮ ಶಿಕ್ಷಣದಿಂದ ಸಮಾಜದ ಮೌಢ್ಯಗಳ ನಿರ್ಮೂಲನೆ ಸಾಧ್ಯ

■ ವಿಜಯವಾಣಿ ಸುದ್ದಿಜಾಲ ಮಾಯಕೊಂಡ

ಸಮಾಜದಲ್ಲಿ ಇಂದಿಗೂ ಜೀವಂತವಾಗಿರುವ ಮೌಢ್ಯ ಹಾಗೂ ಮೂಢನಂಬಿಕೆಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಶಿಕ್ಷಣದಿಂದ ಮಾತ್ರವೇ ಸಾಮಾಜಿಕ ಸುಧಾರಣೆ ಸಾಧ್ಯ ಎಂದು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ಡಿ.ಕೆ. ವೇಲು ಹೇಳಿದರು.

ಆನಗೋಡು ಹೋಬಳಿಯ ಹೊನ್ನೂರು ಗೊಲ್ಲರಹಟ್ಟಿ ಗ್ರಾಮದಲ್ಲಿ ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರ್.ಎಲ್. ಕಾನೂನು ಕಾಲೇಜು ಹಾಗೂ ಹೊನ್ನೂರು ಗ್ರಾಪಂ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.


ಆನಗೋಡು ಹೋಬಳಿಯ ಹೊನ್ನೂರು ಗೊಲ್ಲರಹಟ್ಟಿ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶೆ ಡಿ.ಕೆ.ವೇಲು ಉದ್ಘಾಟಿಸಿದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ್ ಎಂ. ಕರೆಣ್ಣವರ, ಮಹಾಂತ ರುದ್ರೇಶ್ವರ ಶ್ರೀ, ಗಿತ್ತೆ ಮಾಧವ ವಿಠ್ಠಲ ರಾವ್, ಪರಮೇಶ್ವರ ಹೆಗಡೆ ಇದ್ದರು.

ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಋತುಸ್ರಾವದ ಸಂದರ್ಭದಲ್ಲಿ ಮಹಿಳೆಯರನ್ನು ಮನೆಯಿಂದ ಹೊರಗಿಡುವ ಪದ್ಧತಿ ವಿಷಾದನೀಯ. ಮಹಿಳೆಯರು ಇಂದು ಗಗನಯಾತ್ರಿಗಳಾಗಿ, ರಾಷ್ಟ್ರಪತಿಯಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಮುನ್ನಡೆಯುತ್ತಿದ್ದಾರೆ. ಋತುಸ್ರಾವ ಎಂಬುದು ನಿಸರ್ಗದತ್ತ ಕ್ರಿಯೆ. 11-12 ವರ್ಷದ ಹೆಣ್ಣುಮಕ್ಕಳನ್ನು ಹಾಗೂ ಬಾಣಂತಿಯರನ್ನು ಮನೆಯಿಂದ ಹೊರಗಿಡುವುದು ಅವರಿಗೆ ನೀಡುವ ದೈಹಿಕ ಮತ್ತು ಮಾನಸಿಕ ಹಿಂಸೆಯಾಗಿದೆ. ಇಂತಹ ಪದ್ಧತಿಗಳನ್ನು ಕೈಬಿಟ್ಟು ಹೆಣ್ಣುಮಕ್ಕಳನ್ನು ಮನೆಯೊಳಗೆ ಇರಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹೆಬ್ಬಾಳು ವಿರಕ್ತಮಠದ ಮಹಾಂತ ರುದ್ರೇಶ್ವರ ಶ್ರೀ ಮಾತನಾಡಿ, ಅಜ್ಞಾನ ಮತ್ತು ಭಯದಿಂದ ಇಂತಹ ಪದ್ಧತಿಗಳು ಮುಂದುವರಿಯುತ್ತಿವೆ. ಈ ಅಂಧಕಾರ ದೂರವಾಗಬೇಕು. ಋತುಸ್ರಾವದ ದಿನಗಳಲ್ಲಿ ಶುಚಿತ್ವ ಕಾಪಾಡಿಕೊಂಡು ಹೆಣ್ಣುಮಕ್ಕಳನ್ನು ಮನೆಯೊಳಗೇ ಇರಿಸಿಕೊಳ್ಳಿ ಎಂದು ತಿಳಿಸಿದರು.

ಗೊಲ್ಲ ಸಮಾಜದ ಜಿಲ್ಲಾಧ್ಯಕ್ಷ ತಿಪ್ಪೇಸ್ವಾಮಿ, ಗೊಲ್ಲರಹಟ್ಟಿ ಗ್ರಾಮದ ನಿವೃತ್ತ ಇಂಜಿನಿಯರ್ ನಿಜಲಿಂಗಪ್ಪ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪರಮೇಶ್ವರ ಹೆಗಡೆ ಮಾತನಾಡಿದರು.

**ಬದಲಾಗಬೇಕಾದ ಪುಷ್ಪವತಿ:** ಕಾರ್ಯಕ್ರಮದಲ್ಲಿ ಆರ್.ಎಲ್. ಕಾನೂನು ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶಿಸಿದ ಬದಲಾಗಬೇಕಾದ ಪುಷ್ಪವತಿ ಎಂಬ ಕಿರು ನಾಟಕವು ಸಾಮಾಜಿಕ ಪಿಡುಗಿನ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

ಮಹಿಳಾ ಮತ್ತು ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ.ಎಸ್. ರಾಜು ನಾಯ್ಕ್, ಡಿಎಚ್ಒ ಡಾ. ಎಸ್. ಷಣ್ಮುಖಪ್ಪ, ಚಿತ್ರನಟ ಕೆ.ಆರ್. ಪೃಥ್ವಿ ಶಾಮನೂರ್, ಇಒ ರಾಮಭೋವಿ, ಪ್ರಾಚಾರ್ಯ ಪ್ರೊ. ಬಸವನಗೌಡ, ರುದ್ರಮುನಿ, ವೀರೇಶ್, ಜಯಕುಮಾರ್ ಇತರರಿದ್ದರು.

### ಎಲ್ಲರಿಗಿದೆ ಸಮಾನತೆ

**ಸಂವಿಧಾನವು ಎಲ್ಲರಿಗೂ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕು ನೀಡಿದೆ. ಗೊಲ್ಲರಹಟ್ಟಿಯಲ್ಲಿ ಋತುಸ್ರಾವದ ಸಂದರ್ಭದಲ್ಲಿ ಮಹಿಳೆಯರನ್ನು ಇಂದಿಗೂ ಪ್ರತ್ಯೇಕವಾಗಿ ಇಡುವುದು ನೋವಿನ ಸಂಗತಿ. ಇಂತಹ ಪದ್ಧತಿಗಳು ದೂರವಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ್ ಎಂ. ಕರೆಣ್ಣವರ ಹೇಳಿದರು.**